

# ಹಿಂಸೆಯೆಂಬ ಮನೋಮಾಲಿನ್ಯ

■ ಡಾ. ಎಂ. ಶ್ರೀಧರಮೂರ್ತಿ

**ಮನುಷ್ಯ ಹಿಂಸೆಯನ್ನು ಮೈಗೂಡಿಸಿಕೊಳ್ಳುವುದಕ್ಕೂ ಭ್ರಷ್ಟ ಅಥವಾ ಅಪ್ರಾಮಾಣಿಕನಾಗಿರುವುದಕ್ಕೂ ಸಂಬಂಧವಿದೆಯೇ? ಮನಸ್ಸುಗಳ ಅಧ್ಯಯನದಲ್ಲಿ ದಶಕಗಳಿಂದ ತೊಡಗಿಕೊಂಡಿರುವ ನಿವೃತ್ತ ಪ್ರಾಧ್ಯಾಪಕರೊಬ್ಬರ ಅನುಭವವನ್ನು ಆಧರಿಸಿದ ಇಲ್ಲಿನ ಟಿಪ್ಪಣಿಗಳು ಮನೋವ್ಯಾಪಾರದ ಹಲವು ಸಾಧ್ಯತೆಗಳನ್ನು ಪರಿಚಯಿಸುವಂತಿವೆ.**

ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಓಂ ಪ್ರಕಾಶ್ ಅವರು ಇತ್ತೀಚೆಗೆ ಕೊಲೆಯಾದ ಸುದ್ದಿ ಅಚ್ಚರಿಯ ಜೊತೆಗೆ ಗಾಬರಿಯನ್ನೂ ಹುಟ್ಟಿಸುವಂತಹದ್ದು. ಅವರ ಪತ್ನಿ ಪಲ್ಲವಿ, 'ರಾಕ್ಷಸನೊಬ್ಬನನ್ನು ಕೊಂದುಹಾಕಿದೆ' ಎಂದರು. ಮಗಳು ಕೃತಿ ಕೂಡ ಹತ್ಯೆ ಪ್ರಕರಣದಲ್ಲಿ ಆರೋಪಿ. ಕೊಂದ ಹಂತದಿಂದ ವಿಚಾರಣೆಗೆ ಒಳಗಾದ ಘಟ್ಟದವರೆಗೆ ಅಮ್ಮ–ಮಗಳ ವರ್ತನೆ ನೋಡಿ ಗಾಬರಿಗೊಂಡವರು ಕಡಿಮೆಯೇನಿಲ್ಲ.

ಐಪಿಎಸ್ ಅಧಿಕಾರಿಯೊಬ್ಬರ ಇಂತಹ ಕೌಟುಂಬಿಕ ಸ್ಥಿತಿ ಈಗ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯನ್ನು ಪ್ರಜ್ಞಾವಂತರ ಎದುರಲ್ಲಿ ಇಟ್ಟಿದೆ. ವ್ಯಕ್ತಿಗಳ ನಡುವೆ ಭಿನ್ನಾಭಿಪ್ರಾಯ ಇರುತ್ತದೆ. ಹೊಂದಾಣಿಕೆ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯೂ ಉದ್ಭವಿಸುತ್ತದೆ. ಹೀಗೆ ಆದಲ್ಲಿ ಪರಸ್ಪರ ಪ್ರತ್ಯೇಕವಾಗಿ ಇರುವ ಸ್ವಾತಂತ್ರ್ಯವಂತೂ ಇದ್ದೇಇದೆ. ರಾಕ್ಷಸನೊಬ್ಬನ ಜೊತೆಯಲ್ಲಿ ವಾಸ ಮಾಡುವುದು ಅಸಾಧ್ಯ ಎನ್ನಿಸಿದಲ್ಲಿ ಅದಕ್ಕೆ ಮನೋವೈದ್ಯರ ಮೊರೆಹೋಗುವ ದಾರಿಯೂ ಇತ್ತು. ಅದ್ಯಾವುದನ್ನೂ ಮಾಡದೆ ಹತ್ಯೆಯ ದಾರಿ ಹಿಡಿದದ್ದು ಮನೋಮಾಲಿನ್ಯದ ಮಾದರಿಯೊಂದನ್ನು ತೆರೆದಿಟ್ಟಿದೆ.

ಮೃತ ಪೊಲೀಸ್ ಅಧಿಕಾರಿ ಎಕರೆಗಟ್ಟಲೆ ಭೂಮಿಯನ್ನು ಸಂಪಾದಿಸಿದ್ದರು. ಆ ಆಸ್ತಿಯೇ ಅವರ ಸಾವಿಗೆ ಕಾರಣವಾಗಿದೆ ಎನ್ನುವ ವಿಶ್ಲೇಷಣೆಗಳು ನಡೆದಿವೆ.

ಕಾವೇರಿ ವಿವಾದದ ಕುರಿತು ಅಚ್ಚುಕಟ್ಟಾದ ಪುಸ್ತಕ ಬರೆದಿರುವ ಸಿ. ಚಂದ್ರಶೇಖರ್ ಅವರೂ ಐಪಿಎಸ್ ಅಧಿಕಾರಿ ಆಗಿದ್ದವರು. ಅವರನ್ನು ನಾನು ಚೆನ್ನಾಗಿ ಬಲ್ಲೆ. ಅಂಥವರಿಗೆ ಹಲವಾರು ಆಸಕ್ತಿಗಳಿರುತ್ತವೆ. ಅದೇ ಕಾರಣದಿಂದಲೋ ಏನೋ ಅವರು ಮನುಷ್ಯರಾಗಿಯೇ ಇರುತ್ತಾರೆ. ಅವರು ನನ್ನ ಮನೆಗೆ ಬಂದಾಗ, ನನ್ನ ಹೆಂಡತಿಯ ಬಳಿಯಲ್ಲಿ 'ಡ್ರೈವರ್‌ಗೆ ಒಂಚೂರು ಊಟ ಹಾಕಮ್ಮ' ಎಂದು ಹೇಳುತ್ತಿದ್ದರು. ಅದು ವೃತ್ತಿಪರತೆಯೂ ಹೌದು, ಮನುಷ್ಯತ್ವವೂ ಹೌದು. ಇಂತಹ ಸೂಕ್ಷ್ಮ ಎಷ್ಟೋ ಅಧಿಕಾರಿಗಳಿಗೆ ಇರುವುದಿಲ್ಲ. ಜೀಜಾ ಹರಿಸಿಂಗ್ ಅವರಂಥವರಲ್ಲೂ ಮನುಷ್ಯತ್ವದ ಸೆಲೆಯನ್ನು ಕಂಡವನು ನಾನು.

ಓಂ ಪ್ರಕಾಶ್ ಅವರ ವಿಷಯದಲ್ಲಿ ಎಲ್ಲವೂ ಆಸ್ತಿಗಾಗಿ ನಡೆದಿರುವುದು ಮೇಲ್ನೋಟಕ್ಕಂತೂ ಸ್ಪಷ್ಟ. ಐಎಎಸ್, ಐಪಿಎಸ್ ಅಧಿಕಾರಿಗಳಲ್ಲಿ ಎಲ್ಲರಿಗೂ ಎಲ್ಲವನ್ನೂ ನಿಭಾಯಿಸುವುದು ಕಷ್ಟವಾಗುತ್ತದೆ. ಕೆಲವರು ವೃತ್ತಿಬದುಕಿನಲ್ಲಿ ಮುಳುಗಿಹೋಗಿ, ಮನೆಯವರನ್ನು ದೀರ್ಘಾವಧಿ ಕಡೆಗಣಿಸಿರುತ್ತಾರೆ. ಇನ್ನು ಕೆಲವರು, ಅಭದ್ರತೆಯಿಂದಲೇ ಅನುಮಾನದ ಪಿಶಾಚಿಗಳಂತೆ ಬದುಕುತ್ತಿರುತ್ತಾರೆ. ಯಾವಾಗ ಎಲ್ಲವನ್ನೂ ನಿಭಾಯಿಸುವುದು ಸಾಧ್ಯವಿಲ್ಲ ಎಂದು ಗೊತ್ತಾಗುತ್ತದೋ, ಆಗ ಮನೋಚಿಕಿತ್ಸೆಗೆ ಅಗತ್ಯ ಖಂಡಿತ ಇರುತ್ತದೆ. ಬಹುತೇಕರು ಅದಕ್ಕೆ ಒಪ್ಪುವುದಿಲ್ಲ. ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ, ಐಪಿಎಸ್ ಅಧಿಕಾರಿಗಳನ್ನು ಒಳಗೊಂಡಿದ್ದ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಹಾಕಿರುವ ಉದ್ದಾನುದ್ದ ಮೆಸೇಜ್‌ಗಳನ್ನು ನೋಡಿದರೆ, ಅವರು ಮಾನಸಿಕವಾಗಿ ತೊಂದರೆಯಲ್ಲಿ ಇದ್ದರೆನ್ನುವುದು ಸ್ಪಷ್ಟ. ತಜ್ಞವೈದ್ಯರಿಂದ ಚಿಕಿತ್ಸೆ ಅವರಿಗೆ ಸಿಗಬೇಕಿತ್ತು.

ಮಾಡುವ ವೃತ್ತಿ, ಕಲಿತ ವಿದ್ಯೆ, ದಕ್ಕಿಸಿಕೊಂಡ ಸ್ಥಾನ ಇವೆಲ್ಲವುಗಳನ್ನೂ ಮೀರಿದ ಮನೋವ್ಯಾಪಾರವೊಂದು ನಡೆಯುತ್ತಿರುತ್ತದೆ. ಕುಮಾರವ್ಯಾಸನು 'ದಶಮದ'ಗಳ ಬಗ್ಗೆ ಹೇಳುತ್ತಾನೆ. ಅವನು ಹೇಳಿರುವ ಹತ್ತು ಮದಗಳಲ್ಲಿ ಅಧಿಕಾರದ ದರ್ಪವೂ ಒಂದು. ಅದು